## ಕನ್ನಡ ಸಾಹಿತ್ಯ-ಸಂಸ್ಕೃತಿಯ ನಾಳೆಗಳ ಮುಂಗೋಳಿ ಕೂಗು

ಏಕದೇಶ, ಏಕಭಾಷೆ, ಏಕಧರ್ಮ, ಏಕಸಂಸ್ಕೃತಿ ಎಂದು ಬೊಬ್ಬೆ ಹೊಡೆಯುತ್ತ 'ಬಹುತ್ವಗಳ ಭಾರತ'ದ ಒಕ್ಕೂಟ ವ್ಯವಸ್ಥೆಗೆ ಅಪಾಯವನ್ನು ತಂದೊಡ್ಡುತ್ತಿರುವ ಇಂದಿನ ಆತಂಕದ ವಾತಾವರಣದಲ್ಲಿ 2019ರ 'ಸುಧಾ ಯುಗಾದಿ ವಿಶೇಷಾಂಕ' ಭರವಸೆಯ ಬೆಳಕಿನಂತೆ ಕಂಡುಬಂದಿತು. ಕಾರಣ, ನಿರ್ದಿಷ್ಟವಾಗಿ ಕರ್ನಾಟಕದ ಬಹುವ್ಯಾಪ್ತಿಯಲ್ಲಿ ಭಾರತದ ಬಹುತ್ವಗಳನ್ನು ಗೌರವಿಸಿದಂತೆ ವಿನ್ಯಾಸಗೊಂಡಿರುವ ಈ ವಿಶೇಷಾಂಕ, ಇಂತಹ ಚಿಂತನೆಗಳನ್ನು ಒಳಗೊಂಡ ಯುವ ಮನಸ್ಸುಗಳ ದನಿವೇದಿಕೆಯಾಗಿದೆ. ಸಾಮಾಜಿಕ ನ್ಯಾಯ, ಪ್ರಾದೇಶಿಕ ಪ್ರಾತಿನಿಧ್ಯ, ಲಿಂಗ ಸಮಾನತೆಯ ಗುಣಗೌರವ – ಇವುಗಳನ್ನು ಗೌರವಿಸಿದಂತೆ ಭಿನ್ನ ಭಿನ್ನ ಧ್ವನಿಗಳಿಗೆ ಅವಕಾಶ ನೀಡಿರುವ ಈ ಸಂಕಲನ ವಿಶಿಷ್ಟವಾಗಿದೆ.




ಕನ್ನಡದ ಸಾಹಿತ್ಯ ಮತ್ತು ಸಾಂಸ್ಕೃತಿಕ ಲೋಕದ ಮುಂದಿನ ಬೆಳವಣಿಗೆಯ ಮುಂಗೋಳಿ ಕೂಗಿನಂತಿರುವ ಈ ವಿಶೇಷಾಂಕ ಸಂಗ್ರಹಯೋಗ್ಯ ಚಾರಿತ್ರಿಕ ದಾಖಲೆಯಾಗಿಯೂ ಇರುವುದು ಮಹತ್ವದ ಸಂಗತಿ. ಕಥೆ, ಕವಿತೆ, ಪ್ರಬಂಧಗಳಲ್ಲಷ್ಟೇ ಅಲ್ಲದೆ ಬದುಕಿನ ವಿವಿಧ ಕ್ಷೇತ್ರಗಳಲ್ಲಿ ಕ್ರಿಯಾಶೀಲವಾಗಿರುವ ಯುವಮನಸ್ಸುಗಳು ಇಲ್ಲಿ ತಂತಮ್ಮ ಕ್ಷೇತ್ರಗಳ ಅನುಭವಕ್ಕೆ ಅಭಿವ್ಯಕ್ತಿ ನೀಡಿದ್ದಾರೆ. ಅಜ್ಜ ನೆಟ್ಟ ಆಲಕ್ಕೆ ಜೋತುಬೀಳದೆ ತಾವು ಬದುಕುತ್ತಿರುವ ಕ್ಷಣದ ತಲ್ಲಣಗಳಿಗೆ ಸವಾಲುಗಳಿಗೆ ಗಂಭೀರವಾಗಿ ಪ್ರತಿಕ್ರಿಯಿಸಿದ್ದಾರೆ. ಗೊಬ್ಬರದಿಂದ ಹಿಡಿದು ಅಧ್ಯಾತ್ಮದವರೆಗೆ ಈ ಯುವಪೀಳಿಗೆಯ ಚಿಂತನೆ 'ಅರಿವಂ ಪೊಸೆಯಿಸುವ' ಧರ್ಮನಿಷ್ಠ ಸಂವೇದನೆಯಾಗಿದೆ. ಕೆಲವು ಸೃಜನಶೀಲವಾಗಿದ್ದರೆ, ಹಲವು ಪ್ರತಿಕ್ರಿಯಾತ್ಮಕ ರೂಪದಲ್ಲಿವೆ. ಈ ಪ್ರತಿಕ್ರಿಯೆಗಳು ಆಳದಲ್ಲಿ ಪರಂಪರೆಯ ಸಾತತ್ಯ ಜ್ಞಾನವನ್ನು ಅರಗಿಸಿಕೊಂಡಿರುವುದು ಮುಖ್ಯವಿಚಾರ. ಇಂದಿನ ಸೃಜನಶೀಲತೆಯ ಬಗ್ಗೆ ನಿರಾಶಾದಾಯಕ ಮಾತುಗಳನ್ನು ಬೀಸುಹೇಳಿಕೆಗಳಾಗಿ ಎಸೆಯುತ್ತಾ ನಾಸ್ಟಾಲ್ಜಿಯಾದ ಹಳವಂಡದಲ್ಲಿ ಮುಳುಗಿರುವ ಕೊರಗುವೀರರಿಗೆ ಈ ವಿಶೇಷಾಂಕ ಒಂದು ದೊಡ್ಡ ಉತ್ತರರೂಪದಲ್ಲಿದೆ. ಅದರಲ್ಲೂ ವಿಶೇಷಾಂಕದ ಜೊತೆ ನೀಡಿರುವ ಉಚಿತ ವಿಶೇಷಾಂಕ 'ಸೀರೆ ನವನವೀನ' ಉಪಸಂಚಿಕೆಯಂತೂ ಕನ್ನಡದಲ್ಲಿಯೇ ಈ ಬಗೆಯ ವಸ್ತುವಿಶೇಷಕ್ಕೆ ಮೊದಲೆನ್ನುವ ಬರಹವಾಗಿದೆ. ಸೀರೆಯನ್ನು ಕುರಿತು ಎಲ್ಲ ವರ್ಗದ, ಎಲ್ಲ ಸ್ತರದ, ಎಲ್ಲ ಕಾಲದ ನೆಲೆಗಳ ಅನುಭವ, ಅಗತ್ಯತೆ, ಅವಶ್ಯಕತೆ, ಅಲಂಕಾರ, ಆಡಂಬರತೆ, ಕುಶಲತೆ – ಈ ಎಲ್ಲವನ್ನೂ ಒಳಗೊಂಡ ಬರಹ ಇದಾಗಿದೆ. ಕ್ಷೇತ್ರಾಧ್ಯಯನದ ಜೊತೆಗೆ ಸೀರೆಗೆ ಸಂಬಂಧಿಸಿದ ಎಲ್ಲ ಬಗೆಯ ಮಾಹಿತಿಚಿತ್ರಗಳನ್ನೂ ಇದು ಒಳಗೊಂಡಿದೆ. ಇದು ಕೂಡ ಒಂದು ಸಂಗ್ರಹಯೋಗ್ಯ ಸಂಚಿಕೆಯಾಗಿದೆ.

ಸೃಜನಶೀಲ ಬರಹಗಳಲ್ಲಿ, ವಿಚಾರವಂತಿಕೆಯ ಚಿಂತನಶೀಲ ಬರಹಗಳಲ್ಲಿ, ಮಾಹಿತಿಪ್ರಧಾನತೆಯ ಲೇಖನಗಳಲ್ಲಿ 2019ರ 'ಸುಧಾ ಯುಗಾದಿ ವಿಶೇಷಾಂಕ' ಒಂದು ವಿನೂತನ ಪ್ರಯೋಗ. ಸಂಪಾದಕರ ಶ್ರಮ–ಶ್ರದ್ಧೆಗೆ, ಹೆಚ್ಚಿನದಾಗಿ ಈ ಬಗೆಯ ಕಾಲೋಚಿತ ಪ್ರಜ್ಞೆಗೆ ಅಭಿನಂದನೆಗಳು ಹಾಗೂ ಧನ್ಯವಾದಗಳು.

—ಎಸ್.ಜಿ. ಸಿದ್ದರಾಮಯ್ಯ, ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ

## ಹೊಸಬರ ಅಭಿವ್ಯಕ್ತಿಗೆ ವೇದಿಕೆ

'ಸುಧಾ ಯುಗಾಧಿ ವಿಶೇಷಾಂಕ 2019' ಸಹೃದಯ ಓದುಗರ ಕೈ ಸೇರಿದೆ. ಕಥೆ ಮತ್ತು ಕವನಗಳು ಹೊಸ ತಲೆಮಾರಿನ ಬರಹಗಾರರಿಗೆ ವೇದಿಕೆಯನ್ನು ಒದಗಿಸಿಸುವುದರ ಜೊತೆಗೆ ಇಡೀ ಸಂಚಿಕೆ ಹೊಸ ಲೇಖಕ/ಲೇಖಕಿಯರಿಗೆ ಅವರ ಮನೋಧೋರಣೆಯನ್ನು ಅಭಿವ್ಯಕ್ತಿಸಲು ಅನುವು ಮಾಡಿಕೊಟ್ಟಿದೆ. 'ಹಸಿವು' ಕಥೆ ಓದುಗರನ್ನು ಯೋಚನೆಗೆ ಹಚ್ಚುತ್ತವೆ. ರಶ್ಮಿ ಅವರ 'ತಾಳಿ' ಕಥೆ ಓದಿ ದಿನವೆಲ್ಲ ಅದರ ಗುಂಗಿನಲ್ಲೇ ಮುಳುಗಿಹೋದೆ. ಒಂದು ಗುರುತಿಸಬೇಕಾದ ಸಂಗತಿಯೆಂದರೆ ಹೊಸ ಬರಹಗಾರರ ಆಲೋಚನೆಗಳು ನಗರಕ್ಕೆ ಸೀಮಿತವಾಗಿರದೇ ಹಳ್ಳಿಯ ಜನಜೀವನವನ್ನು ಸಮಗ್ರವಾಗಿ ಚಿತ್ರಿಸಿರುವುದು. ಕವನಗಳು ನವನವೀನವಾಗಿವೆ. ಲಲಿತ ಪ್ರಬಂಧಗಳು ಮನ ಮುಟ್ಟುತ್ತವೆ.

—ಬಿ.ಯೋಗಾನಂದ ಕೊನ್ನಾಪುರ, ಮಂಡ್ಯ

ಸುಧಾ ಯುಗಾದಿ ವಿಶೇಷಾಂಕದ ಹಾಳೆ ಮಡಿಚಿದಂತೆ,
ಯುವ ಮನಸುಗಳ ವರ್ತಮಾನದ
ಲವಲವಿಕೆಯ ಸಮಾಗಮ.
ಪುಟಪುಟವೂ ಹೊಸ ಭಾವನೆಗಳ ಸಮ್ಮಿಲನ.
ಹಳೆ ಹೊಸ ಪ್ರತಿಭೆಗಳ
ಅಕ್ಷರ ಮಾಲೆಗಳ ನಕ್ಷತ್ರಲೋಕ

—ಪ್ರಕಾಶ ಕಡಮೆ, ಕವಿ

## ಮೈ ಕೊಡವಿಕೊಳ್ಳುವ ಪ್ರಯೋಗಶೀಲ ಸಂಚಿಕೆ

ಈ ಬಾರಿಯ 'ಸುಧಾ ಯುಗಾದಿ ವಿಶೇಷಾಂಕ' ವಿಭಿನ್ನವಾಗಿದೆ. ಎಷ್ಟೆಂದರೆ ವಿಭಿನ್ನವಾಗಲು ನಡೆಸಿದ ಪ್ರಯತ್ನ ಕಣ್ಣಿಗೆ ಎದ್ದು ಕಾಣುವಷ್ಟು ವಿಭಿನ್ನವಾಗಿದೆ. ಮೈಕೊಡವಲು ಮಾಡಿದ ಪ್ರಯತ್ನಕ್ಕಾಗಿ ಪ್ರಶಂಸಿಸಲೇಬೇಕು. ಓದಿ ಕೆಲ ದಿನಗಳ ನಂತರವೂ ಮನಸ್ಸಲ್ಲಿ ಉಳಿದ ಕೆಲ ವಿಚಾರಗಳನ್ನು ಇಲ್ಲಿ ಪ್ರಾಸ್ತಾಪಿಸುತ್ತೇನೆ.

'ರೂಟುಗಳು ಮತ್ತು ರೌಟರುಗಳು' ಎಂಬ ಪ್ಯಾಪಿಲಾನ್ ಅವರ ಬರಹ ಬಹುವಾಗಿ ಯೋಚನೆಗೆ ಹಚ್ಚಿತು. ಗಣಪತಿ ವಿಸರ್ಜನೆ, ಬರಿ ಗಣಪತಿ ವಿಸರ್ಜನೆ ಆಗದೆ, ಗಲಾಟೆ ಗಣಪತಿ ವಿಸರ್ಜನೆಯೋ, ಅಮಿರ್ ಅಹ್ಮದ್ ಸರ್ಕಲ್ ಗಣಪತಿ ವಿಸರ್ಜನೆಯೋ ಆಗಿಹೋಗುವ ಈ ಹೊತ್ತಿನ ರಾಜಕೀಯ ಮತ್ತು 'False pride'ನ ಮಹಿಮೆಯನ್ನು ತುಂಬ ಚೆನ್ನಾಗಿ ಮತ್ತು ಅವಶ್ಯವಾಗಿರುವ ಆಪ್ತ ಧಾಟಿಯಲ್ಲಿ ವಿವರಿಸಿದೆ.

ಆಯಿ ಹೇಳುತ್ತಿದ್ದ ರಾಕ್ಷಸರ ಕತೆಗಳೋ, ನರಿ ಮದುವೆಯ ಕತೆಯೋ ಪ್ರಭಾವಿಸುತ್ತಿದ್ದ ಹಾಗೆ 'ಆಟೊಗೆ ನಾಲ್ಕು ಕಾಲುಗಳಿತ್ತು' ಎಂಬ ಹೊಸ ಅರ್ಬನ್ ಮಿಥ್ ರೂಪಿಸುವ ರೀತಿಯ, ತುಂಬ 'Playful' ಆದ ಕತೆಯನ್ನು ಬಾದಲ್ ಬರೆದಿದ್ದಾರೆ. ಕನ್ನಡದ ಯುವ ಬರಹಗಾರರಿಗೆ ವೃದ್ಧಾಪ್ಯ ಕವಿದಿದೆ ಎಂದು ಹಿರಿಯರೊಬ್ಬರು ಹೇಳಿದ್ದರು. ಬಾದಲ್ ಯೌವನದಿಂದಲೂ ತುಸು ಹಿಂದೆ ಹೋಗಿ ಕೌಮಾರ್ಯ ಆವಾಹಿಸಿಕೊಂಡು ಬರೆದಂತಿದೆ ಈ ಕತೆ.

ಕತೆಗಳಿಗೆ ಚಿತ್ರ ಬರೆದ ಕಲಾವಿದರಿಂದ ಕತೆಗಳ ಬಗ್ಗೆ ಟಿಪ್ಪಣಿ ಬರೆಯಿಸಿ ಹಿರಿ–ಕಿರಿಯರ ಅನುಸಂಧಾನ ಮಾಡಿಸಿದ್ದು ಅರ್ಥಪೂರ್ಣ ಪ್ರಯೋಗ. ಹಾಗೆಯೇ ಕಲಾವಿದರ ಚಿತ್ರಗಳ ಸರಣಿಗೆ ಕತೆ ಬರೆಸುವ ಪ್ರಯೋಗವೂ ಮುಂದೆ ಆಗಲಿ.

ಕೆಲವು ಬರಹಗಳ ಶೀರ್ಷಿಕೆಗಳು, ಪ್ರಾಸಕ್ಕೆ ಕಟ್ಟುಬೀಳುವ ಟೀವಿ ಮಾಧ್ಯಮದ ರೋಗಕ್ಕೆ ಸಿಲುಕಿ ನಲುಗಿದೆ. ಪ್ರಾಸ ಅಥವಾ ಅನಗತ್ಯ 'ಪನ್' ಮಾಡುವ ಚಾಳಿಯಿಂದ ಪತ್ರಿಕೆಗಳು ಶೀರ್ಷಿಕೆ ಕೊಡುವ ಕಲೆಯನ್ನೇ ಮರೆತುಬಿಡುತ್ತಿದೆಯೇ ಎಂದೂ ಭಯವಾಗುತ್ತಿದೆ.

ಒಟ್ಟಾರೆ, 'ಯುಗ ಯುಗಾದಿ ಕಳೆದರೂ ಮತ್ತವರದೇ ಕತೆಗಳು ಬರುತಿವೆ' ಎಂಬಂತಾಗಿರುವಾಗ, ಸಂಪೂರ್ಣವಾಗಿ ಹೊಸಬರಿಗೆ ಮಣೆ ಹಾಕಿದ್ದು ಖಂಡಿತ ಪ್ರಶಂಸನೀಯ. ಇನ್ನೂ ವಿಷಯ ವಿಸ್ತಾರ ಮತ್ತು ಭಿನ್ನ ಶೈಲಿಯ ಬರವಣಿಗೆಗೆ ಅವಕಾಶ ಮುಂದೆ ಒದಗಿಬರಲಿ.

—ನಟೇಶ ಕೊಟ್ಟಳ್ಳಿ, ಸಿನಿಮಾ ನಿರ್ದೇಶಕರು